Office of the Commissioner of Commercial Taxes, Bengaluru
27 JAN 2021
D.C.C.T.
(E-Government)

ಕರ್ನಾಟಕ ಸರ್ಕಾರ
(ವಾಣಿಜ್ಯ ತೆರಿಗೆಗಳ ಇಲಾಖೆ)

**ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ಸರಕು ಮತ್ತು ಸೇವಾ ತೆರಿಗೆ-3, ಬೆಂಗಳೂರು ಇವರ ನಡಾವಳಿಗಳು**

ಸಂಖ್ಯೆ: ವಾ.ಶಾ/ಸಿ.ಆರ್-01/2020-21 **ದಿನಾಂಕ : 27.01.2021**
ಕ್ರ.ನಂ.723/20-21

## ಅಧಿಸೂಚನೆ

**ವಿಷಯ :** ಸರ್ಕಾರಿ ವಾಹನ ಸಂಖ್ಯೆ : ಕೆಎ 01 ಜಿ 3034 ಟಾಟಾ ಸುಮೋ ಹಳೆಯ ಒಂದು ವಾಹನವನ್ನು ಬಹಿರಂಗ ಹರಾಜು ಮಾಡುವ ಕುರಿತು.

**ಉಲ್ಲೇಖ:**
1. ವಾ.ತೆ.ಅ ಪತ್ರದ ಸಂಖ್ಯೆ: ವಿಹೆಚ್‌ಟಿ/ಸಿಆರ್.07/2013-14 ದಿನಾಂಕ:22.10.2013
2. ಈ ಕಛೇರಿ ಸಮ ಸಂಖ್ಯೆ ಪತ್ರ ದಿನಾಂಕ : 21.09.2013.
3. ಪ್ರಾ.ಸಾ.ಅ ಅವರ ಕಛೇರಿಯ ಶಿಫಾರಸ್ಸು ಪತ್ರದ ಸಂಖ್ಯೆ: ಇಲ್ಲ, ದಿನಾಂಕ:29.08.2013
4. ಈ ಕಛೇರಿಯ ದಿನಾಂಕ : 13.06.2014ರ ಅಧಿಸೂಚನೆ.
5. ಈ ಕಛೇರಿ ಸಮ ಸಂಖ್ಯೆ ಪತ್ರ ದಿನಾಂಕ: 18.10.2019
6. ಸಾರಿಗೆ ಇಲಾಖಾ ನಿರೀಕ್ಷಕರು ಇವರ ದಿನಾಂಕ :29.10.2019 ರ ವರದಿ
7. ಈ ಕಛೇರಿಯ ಪತ್ರದ ಸಂಖ್ಯೆ: ವಾ.ಶಾ/ ಸಿ.ಆರ್-628/2019-20 ದಿನಾಂಕ :14.01.2020
8. ಈ ಕಛೇರಿಯ ಪತ್ರದ ಸಂಖ್ಯೆ: ಟಿ.ನಂ.651/2019-20 ದಿನಾಂಕ : 30.01.2020
9. ಸಾರಿಗೆ ಇಲಾಖಾ ಹಿರಿಯ ನಿರೀಕ್ಷಕರು, ಆರ್.ಟಿ.ಓ ಬೆಂಗಳೂರು ಸೆಂಟ್ರಲ್ ಇವರ ವರದಿ ದಿನಾಂಕ :19.01.2021

*********

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ಸರಕು ಮತ್ತು ಸೇವಾ ತೆರಿಗೆ-3, ಬೆಂಗಳೂರು ಇವರ ಕಛೇರಿಗೆ ಸಂಬಂಧಿಸಿದ ಒಂದು ಹಳೆಯ ಟಾಟಾ ಸುಮೋ ವಾಹನವನ್ನು ಯಾವ ಸ್ಥಿತಿಯಲ್ಲಿದೆಯೋ ಅದೇ ಸ್ಥಿತಿಯಲ್ಲಿ ವಿಲೇವಾರಿ ಮಾಡಲು ಉದ್ದೇಶಿಸಲಾಗಿದೆ. ಸದರಿ ವಾಹನವನ್ನು ದಿನಾಂಕ: 04.02.2021 ರಂದು ಬೆಳಿಗ್ಗೆ 11.30 ಗಂಟೆಗೆ ಈ ಕಛೇರಿಯ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ) ರವರ ಕೊಠಡಿಯಲ್ಲಿ ಸಾರ್ವಜನಿಕ ಸಮಕ್ಷಮ ಬಹಿರಂಗ ಹರಾಜು ಮಾಡಲು ನಿಗಧಿಪಡಿಸಲಾಗಿದೆ. ಆದ್ದರಿಂದ ಇಚ್ಛೆಯುಳ್ಳವರು ಸದರಿ ಹರಾಜಿನಲ್ಲಿ ಭಾಗವಹಿಸಿ ವಾಹನವನ್ನು ಖರೀದಿಸಬಹುದಾಗಿರುತ್ತದೆ.

## ಹರಾಜಿನ ವಾಹನದ ವಿವರ ಈ ಕೆಳಕಂಡಂತಿರುತ್ತದೆ.

| ಕ್ರ.ಸಂ | ವಾಹನ ಹೆಸರು | ವಾಹನ ಸಂಖ್ಯೆ | ಮಾಡೆಲ್ | ಚಾಸ್ಸಿ ಸಂಖ್ಯೆ | ಇಂಜಿನ್ ಸಂಖ್ಯೆ | ಸಾರಿಗೆ ಇಲಾಖೆ ನಿಗದಿಪಡಿಸಿರುವ ಕನಿಷ್ಠ ಮೊತ್ತ |
|---|---|---|---|---|---|---|
| 1 | ಟಾಟಾ ಸುಮೋ | ಕೆಎ 01 ಜಿ 3034 | 1998 | 385003 ಕೆಎಸ್‌ಕ್ಯೂ 943350 | 483 ಡಿಎಲ್ 41 ಕೆಎಸ್‌ಕ್ಯೂ 8079610 | ರೂ.28,800.00 |

ಈ ಮೇಲ್ಕಂಡ ವಾಹನವನ್ನು ಬಹಿರಂಗ ಹರಾಜಿನಲ್ಲಿ ಭಾಗವಹಿಸುವ ಬಿಡ್‌ದಾರರು ಈ ಕೆಳಗೆ ಸೂಚಿಸಿರುವ ಷರತ್ತುಗಳು ಮತ್ತು ನಿಬಂಧನೆಗಳಿಗೆ ಒಳಪಟ್ಟಿರಬೇಕಾಗಿರುತ್ತದೆ.

ಮು.ತಿ.ನೋ


ವಾ.ತೆ.ಜಂ.ಆ.(ಆ)

## ಬಹಿರಂಗ ಹರಾಜಿನ ಷರತ್ತು ನಿಬಂಧನೆಗಳು

1) ಪ್ರತಿಯೊಬ್ಬ ಬಿಡ್‌ದಾರರು ವಾಹನದ ಹರಾಜಿನಲ್ಲಿ ಭಾಗವಹಿಸಲು, ಭದ್ರತಾ ಠೇವಣಿ ರೂ. 5000.00 (ರೂ. ಐದು ಸಾವಿರ ರೂಪಾಯಿಗಳು) ಡಿ.ಡಿ. ರೂಪದಲ್ಲಿ ಅಥವಾ ನಗದು ರೂಪದಲ್ಲಿ ಬಹಿರಂಗ ಹರಾಜು ನಡೆಯುವ ಸ್ಥಳದಲ್ಲಿ 10.15 ಗಂಟೆಯಿಂದ 11.00 ಗಂಟೆಯೊಳಗೆ ಪಾವತಿಸಿ ತಮ್ಮ ಹೆಸರುಗಳನ್ನು ನೊಂದಾಯಿಸಬೇಕು. 11.00 ಗಂಟೆಯ ನಂತರ ಬಂದ ಬಿಡ್‌ದಾರರ ಹೆಸರುಗಳನ್ನು ಬಹಿರಂಗ ಹರಾಜಿಗೆ ಪರಿಗಣಿಸುವುದಿಲ್ಲ. ಠೇವಣಿ ಹಣಕ್ಕೆ ಬಡ್ಡಿಯನ್ನು ಕೊಡಲಾಗುವುದಿಲ್ಲ.

2) ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಆಡಳಿತ), ಸರಕು ಮತ್ತು ಸೇವಾ ತೆರಿಗೆ-3, ಬೆಂಗಳೂರು ಇವರು ನೇಮಿಸಲ್ಪಟ್ಟ ಅಧಿಕಾರಿಗಳಿಂದ ಬಹಿರಂಗ ಹರಾಜನ್ನು ನಡೆಸಲಾಗುವುದು. ಠೇವಣಿ ಬಿಡ್‌ದಾರರು ಸವಾಲಿನಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ.

3) ಬಹಿರಂಗ ಹರಾಜಿಗಿಟ್ಟಿರುವ ಮೇಲೆ ಹೇಳಿದ ವಾಹನಕ್ಕೆ ನಿಗದಿ ಪಡಿಸಿರುವ ಕನಿಷ್ಠ ಬೆಲೆ ರೂ.28,800/- ಬಹಿರಂಗ ಹರಾಜಿನಲ್ಲಿ ಅತಿ ಹೆಚ್ಚಿನ ಬೆಲೆಯನ್ನು ದಾಖಲು ಮಾಡಿದ ಬಿಡ್‌ದಾರರನ್ನು ಯಶಸ್ವಿದಾರರೆಂದು ಪರಿಗಣಿಸಲಾಗುವುದು.

4) ಯಶಸ್ವಿಯಾದ ಬಿಡ್‌ದಾರರು ವಾಹನದ ಒಟ್ಟು ಬೆಲೆಯ ಶೇ.50 ರಷ್ಟು ಹಣವನ್ನು ಸ್ಥಳದಲ್ಲಿಯೇ ಪಾವತಿಸಬೇಕು. ಉಳಿದ ಶೇ.50 ರಷ್ಟು ಹಣವನ್ನು ನಂತರದ ಏಳು ದಿನಗಳೊಳಗಾಗಿ ಪಾವತಿಸುವುದು. ತಪ್ಪಿದಲ್ಲಿ ಮುಂಗಡವಾಗಿ ಕಟ್ಟಿದ ಶೇ.50 ರಷ್ಟು ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದಲ್ಲದೇ ವಾಹನವನನ್ನು ಮರು ಹರಾಜಿನಲ್ಲಿ ಮಾರಾಟ ಮಾಡಲಾಗುವುದು.

5) ಹರಾಜು ಮಾಡಲಾದ ವಾಹನದ ಮೌಲ್ಯಕ್ಕೆ ಚಾಲ್ತಿಯಲ್ಲಿರುವ 'ಜಿಎಸ್‌ಟಿ' ತೆರಿಗೆಯನ್ನು ಪ್ರತ್ಯೇಕವಾಗಿ ಪಾವತಿ ಮಾಡಬೇಕು.

6) ಹರಾಜಿನಲ್ಲಿ ಭಾಗವಹಿಸಿದ ಬಿಡ್‌ದಾರರು ಹರಾಜು ಮುಗಿದ ನಂತರ ಹರಾಜಿನಲ್ಲಿ ಯಶಸ್ವಿಯಾದವರು ಮತ್ತು ಯಶಸ್ವಿಯಾಗದವರು ಸರ್ಕಾರಿ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು. ಯಶಸ್ವಿಯಾಗದ ಬಿಡ್‌ದಾರರಿಗೆ ಭದ್ರತಾ ಠೇವಣಿಯನ್ನು ಸ್ಥಳದಲ್ಲಿ ಹಿಂತಿರುಗಿಸಲಾಗುವುದು.

7) ಹರಾಜನ್ನು ಅಂಗೀಕರಿಸುವ, ರದ್ದುಪಡಿಸುವ/ತಿರಸ್ಕರಿಸುವ ಅಧಿಕಾರವನ್ನು ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ಸರಕು ಮತ್ತು ಸೇವಾ ತೆರಿಗೆ-3, ಬೆಂಗಳೂರು ರವರು ಹೊಂದಿರುತ್ತಾರೆ. ಇವರ ತೀರ್ಮಾನವೇ ಅಂತಿಮವಾಗಿರುತ್ತದೆ.

8) ಹರಾಜು ಮಾಡಲಿರುವ ಚಲಿಸದ ಸ್ಥಿತಿಯಲ್ಲಿರುವ/ನಿರುಪಯುಕ್ತ ಹಳೆಯ ವಾಹನವನ್ನು ಕಛೇರಿ ಆವರಣದಲ್ಲಿ ಪರಿಶೀಲನೆಗಾಗಿ ಇಡಲಾಗಿದೆ. ಇಚ್ಛೆಯುಳ್ಳವರು ಕಛೇರಿ ವೇಳೆಯಲ್ಲಿ ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು (ಕೇ.ಕ) ಇವರನ್ನು ಸಂಪರ್ಕಿಸಿ, ಪರಿಶೀಲನೆ ಮಾಡಿ, ಹರಾಜಿನಲ್ಲಿ ಭಾಗವಹಿಸುವುದು.

**ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಆಡಳಿತ),**
**ಸರಕು ಮತ್ತು ಸೇವಾ ತೆರಿಗೆ-3, ಬೆಂಗಳೂರು**

**ಪ್ರತಿಗಳು:**

1. ಮಾನ್ಯ ವಾಣಿಜ್ಯ ತೆರಿಗೆಗಳ ಆಯುಕ್ತರು(ಕರ್ನಾಟಕ) ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
2. ಮಾನ್ಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಬೆಂಗಳೂರು(ಕೇಂದ್ರ), ಕೋರಮಂಗಲ, ಬೆಂಗಳೂರು ಇವರು ತಮ್ಮ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಿದೆ.
3. ವಾಣಿಜ್ಯ ತೆರಿಗೆ ಉಪ ಆಯುಕ್ತರು, ಇ-ಆಡಳಿತ, ವಾಣಿಜ್ಯ ತೆರಿಗೆ ಆಯುಕ್ತರ ಕಛೇರಿ, ಬೆಂಗಳೂರು ರವರಿಗೆ ಇಲಾಖೆಯ ಅಂತರ್ಜಾಲ ತಾಣ ಮತ್ತು ಎರಡರಲ್ಲಿಯೂ ಪ್ರಕಟಿಸಲು ಕೋರಿದೆ.
4. ಸೂಚನಾ ಫಲಕ
5. ಕಛೇರಿ ಪ್ರತಿ